



ವಿಷಯಾಸಕ್ತಿ

ಎಲ್ಲಿಯವರೆಗೆ ವಿಷಯಾಸಕ್ತಿ ಇರುವುದೊ, ಕಾಮ ಕಾಂಚನದ ಮೇಲೆ ಪ್ರೀತಿ ಇರುವುದೊ, ಅಲ್ಲಿಯವರೆಗೆ ದೇಹ ಬುದ್ಧಿ ಹೋಗದು. ವಿಷಯಾಸಕ್ತಿ ಎಷ್ಟೆಷ್ಟು ಮಟ್ಟಿಗೆ ಕಡಮೆ ಯಾಗುವುದೊ ಅಷ್ಟಷ್ಟು ಮಟ್ಟಿಗೆ ಆತ್ಮಜ್ಞಾನದ ಕಡೆ ಮುಂದು ವರಿಯಬಹುದು; ದೇಹಬುದ್ಧಿ ಕೂಡ ಕಡಿಮೆಯಾಗುತ್ತದೆ. ವಿಷಯಾಸಕ್ತಿ ಬೇರುಸಹಿತ ಹೊರಟುಹೋದರೆ ಆತ್ಮಜ್ಞಾನ ದೊರಕುತ್ತದೆ. ಆಗ ಆತ್ಮ ಬೇರೆ, ದೇಹ ಬೇರೆ ಎಂಬ ಬೋಧೆ ಯಾಗುತ್ತದೆ. ತೆಂಗಿನಕಾಯಿಯ ನೀರು ಇಂಗದ ಮುನ್ನ ಅದನ್ನು ಮಚ್ಚಿನಿಂದ ಕತ್ತರಿಸಿ ತಿರುಳನ್ನು ಪ್ರತ್ಯೇಕ, ಕರಟವನ್ನು ಪ್ರತ್ಯೇಕ ಮಾಡಬೇಕಾದರೆ ಕಷ್ಟಪಡಬೇಕಾಗುತ್ತದೆ. ಆದರೆ ಒಳಗೆ ನೀರು ಇಂಗಿಹೋಗಿಬಿಟ್ಟಿತು ಎಂದರೆ ತಿರುಳು ಒಳಗೆ ಸುಮ್ಮನೆ ಗಡ ಗಡ ಎಂದು ಶಬ್ದ ಮಾಡುತ್ತದೆ. ಅದು ಕರಟದಿಂದ ಬೇರೆಯಾಗಿದೆ. ಅದನ್ನು ತೆಂಗಿನ ಗಿಟಕು ಅನ್ನುತ್ತಾರೆ.

ಭಗವಂತನನ್ನು ಪಡೆದರೆ ವ್ಯಕ್ತಿಯಲ್ಲಿ ಈ ಕುರುಹು ಕಂಡು ಬರುತ್ತದೆ. ಆತ ತೆಂಗಿನ ಗಿಟಕಿನಂತೆ ಆಗಿಬಿಡುತ್ತಾನೆ; ದೇಹ ಬುದ್ಧಿ ಹೊರಟುಹೋಗುತ್ತದೆ. ದೇಹದ ಸುಖದುಃಖ ತನ್ನ ಸುಖ ದುಃಖ ಎಂಬ ಭಾವನೆ ಆತನಿಗೆ ಉಂಟಾಗದು. ಆ ವ್ಯಕ್ತಿ ದೇಹದ ಸುಖವನ್ನು ಇಚ್ಛಿಸುವುದಿಲ್ಲ. ಜೀವನ್ಮುಕ್ತನಾಗಿ ಸುಳಿದಾಡುತ್ತಾನೆ.

ಭಗವನ್ನಾಮ ಶ್ರವಣಮಾತ್ರದಿಂದಲೆ ಪ್ರೇಮಾಶ್ರು ಮತ್ತು ಪುಲಕ ಉಂಟಾಗುವುದು ಕಂಡುಬಂದರೆ ಆಗ ಕಾಮ ಕಾಂಚನಾಸಕ್ತಿ ಹೊರಟುಹೋಗಿದೆ, ಭಗವಂತನ ಸಾಕ್ಷಾತ್ಕಾರ ದೊರೆತಿದೆ ಎಂದು ತಿಳಿಯಬೇಕು. ಬೆಂಕಿಕಡ್ಡಿ ಒಣಗಿದ್ದರೆ ಒಮ್ಮೆ ಗೀಚಿದರೆ ಸಾಕು ಭುಗ್ಗನೆ ಹತ್ತಿಕೊಂಡುಬಿಡುತ್ತದೆ. ಅದೇನಾದರೂ ನೆನೆದಿದ್ದರೆ ಒಂದ್ಯವತ್ತು ಬಾರಿ ಗೀಚಿದರೂ ಏನೂ ಆಗದು. ಬರಿದೆ ಬೆಂಕಿಕಡ್ಡಿಗಳ ನಷ್ಟ. ವಿಷಯರಸದಲ್ಲಿ ನೆನೆದಿದ್ದರೆ, ಕಾಮ ಕಾಂಚನ ರಸದಲ್ಲಿ ಮನಸ್ಸು ನೆನೆದಿದ್ದರೆ, ಭಗವಂತನ ಉದ್ದೀಪನೆ ಆಗದು. ಕಂಡ ಆಟವನ್ನೆಲ್ಲ ಆಡು, ಅದೆಲ್ಲ ಬರಿದೆ ವಿಫಲ. ವಿಷಯರಸ ಒಣಗಿಹೋದರೆ ಒಡನೆಯೆ ಉದ್ದೀಪನೆ ಉಂಟಾಗಿ ಬಿಡುತ್ತದೆ.

**ಬ್ರಾಹ್ಮಭಕ್ತ ತ್ರೈಲೋಕ್ಯ ಕೇಳುತ್ತಾನೆ:** ವಿಷಯರಸವನ್ನು ಒಣಗಿಸಲು ಸದ್ಯಕ್ಕೆ ಉಪಾಯವೇನು?

**ಶ್ರೀರಾಮಕೃಷ್ಣರು:** ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿಹೋಗಿ ಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟುಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೆ ಹಾಗಾಗಿಬಿಡುತ್ತದೆ. ಆಕೆ ನಿನ್ನ ಸಾಕುತಾಯಿ ಅಲ್ಲ, ನಿನ್ನ ಸ್ವಂತ ತಾಯಿ. ವ್ಯಾಕುಲನಾಗಿ ಹಟಹಿಡಿದು ಆಕೆಯನ್ನು ಕೇಳು. ಮಗು ಗಾಳಿಪಟ ಕೊಂಡುಕೊಳ್ಳಲೋಸುಗ ತಾಯ ಸೆರಗನ್ನು ಹಿಡಿದು ದುಡ್ಡು ಕೇಳುತ್ತದೆ. ಮೊದಲು ಆಕೆಗೆ ಕೊಡಲು ಇಚ್ಛೆಯಿರುವುದಿಲ್ಲ. ಮಗು ಅಳಲು ಪ್ರಾರಂಭಿಸುತ್ತದೆ, ಏನು ಮಾಡಿದರೂ ಬಿಡಲೊಲ್ಲದು. ಆಗ ತಾಯಿ ಮಣಿಯಲೇಬೇಕಾ ಗುತ್ತದೆ.

ಕೇವಲ ವಿಷಯಚಿಂತನೆಯಲ್ಲಿಯೇ ಮುಳುಗಿಹೋಗಿದ್ದರೆ ಲೆಕ್ಕಾಚಾರದ ಸ್ವಭಾವ ಬಂದುಬಿಡುತ್ತದೆ; ಮನುಷ್ಯ ಕಪಟಿ ಯಾಗಿಬಿಡುತ್ತಾನೆ. ಭಗವಚ್ಚಿಂತನೆ ಮಾಡಿದರೆ ಸರಳನಾಗುತ್ತಾನೆ.

ಯಾರು ಭಗವಚ್ಚಿಂತನೆ ಮಾಡುತ್ತಾರೊ, ಯಾರು ವಿಷಯ ಗಳಲ್ಲಿ ಆಸಕ್ತಿ, ಕಾಮಕಾಂಚನದಲ್ಲಿ ಆಸಕ್ತಿ ತೊಲಗಿಹೋಗಲು ಹಗಲೂ, ಇರುಳೂ ಭಗವಂತನ ಪ್ರಾರ್ಥನೆ ಮಾಡುತ್ತಾರೊ, ಯಾರಿಗೆ ವಿಷಯರಸ ಕಹಿಯಾಗಿ ತೋರುವುದೊ, ಯಾರಿಗೆ ಹರಿಪಾದಪದ್ಮಸುಧೆಯ ಹೊರತು ಬೇರೆ ಏನೂ ರುಚಿಸದೊ, ಅಂಥವರ ಸ್ವಭಾವ ಹಂಸಪಕ್ಷಿಯ ಹಾಗೆ ಆಗಿಬಿಡುತ್ತದೆ. ಹಂಸದ ಎದುರು ನೀರು ಬೆರಸಿದ ಹಾಲನ್ನು ಇಡಿ, ಅದು ನೀರನ್ನು ಬಿಟ್ಟು ಹಾಲನ್ನು ಕುಡಿದುಬಿಡುತ್ತದೆ.

**ಅತುಲ:** ನಮ್ಮ ಮನಸ್ಸನ್ನು ಆತನ ಪಾದಪದ್ಮಗಳಲ್ಲಿ ಇಡುವುದು ಹೇಗೆ?

**ಶ್ರೀರಾಮಕೃಷ್ಣರು:** ಅಭ್ಯಾಸಯೋಗದಿಂದ. ಒಂದೇ ದಿನದಲ್ಲಿ ಇದು ಬರದು; ದಿನವೂ ಅವನನ್ನು ಕರೆಯುತ್ತಾ ಕರೆಯುತ್ತಾ ಹೋದರೆ ವ್ಯಾಕುಲತೆ ಬಂದುಬಿಡುತ್ತದೆ. ಯಾವಾಗ ನೋಡಿದರೂ ಹಗಲು ಇರುಳು ಎನ್ನದೆ ವಿಷಯಕರ್ಮಗಳಲ್ಲಿಯೇ ತೊಡಗಿದ್ದರೆ ವ್ಯಾಕುಲತೆ ಹೇಗೆ ಉಂಟಾದೀತು? ಹಿಂದೆ ಯದುಮಲ್ಲಿಕ ಭಗವತ್ಸಂಬಂಧವಾದ ಮಾತುಕತೆಗಳನ್ನು ಕೇಳುವುದರಲ್ಲಿ ಮತ್ತು ಆಡುವುದರಲ್ಲಿ ಬಹಳ ಆಸಕ್ತಿಯನ್ನು ತೋರಿಸುತ್ತಿದ್ದ. ಈಗ ಅಷ್ಟೊಂದು ಆಸಕ್ತಿ ಇಲ್ಲ. ಹಗಲೂ ಇರುಳೂ ಹೊಗಳುಭಟ ರನ್ನು ಕಟ್ಟಿಕೊಂಡು ವಿಷಯವಸ್ತುಗಳ ಸಂಬಂಧವಾದ ಮಾತು ಕತೆಗಳಲ್ಲಿಯೇ ನಿರತನಾಗಿದ್ದಾನೆ. ವಿಷಯಚಿಂತನೆ ಮಾಡಿದಷ್ಟೂ ಅವುಗಳಲ್ಲಿ ಆಸಕ್ತಿ ಬೆಳೆಯುತ್ತಾ ಹೋಗುತ್ತದೆ.

ವಿಷಯಬುದ್ಧಿ ಇದ್ದಿತು ಎಂದರೆ ಉಪದೇಶವನ್ನು ಗ್ರಹಿಸಲು ಆಗುವುದಿಲ್ಲ. ಹೊಸ ಮಡಕೆಯಲ್ಲಿ ಹಾಲನ್ನು ಇಡಬಹುದು. ಮೊಸರಿನ ಮಡಕೆಯಲ್ಲಿ ಹಾಲನ್ನು ಇಟ್ಟರೆ ಅದು ಒಡೆದು ಹೋಗುತ್ತದೆ. ಯಾವ ಪಾತ್ರೆಯಲ್ಲಿ ಬೆಳ್ಳುಳ್ಳಿ ರಸವನ್ನು ಹಾಕಿ ಇಟ್ಟಿತ್ತೊ ಅದನ್ನು ಒಂದು ಸಾವಿರ ಸಲ ತೊಳೆಯಿರಿ, ಅದು ಬೆಳ್ಳುಳ್ಳಿ ವಾಸನೆಯಿಂದ ಪಾರಾಗದು.